# ನೇತ್ರದಾನ ಪರಿಚಾರಿಕೆಯ ಮಧುಗಿರಿಯ ಮಾದರಿ

ನಮ್ಮ ಮಾವ ನಾಗರಾಜ ಶೆಟ್ಟಿ ಅವರಿಗೆ ತಮ್ಮ ಕಣ್ಣುಗಳನ್ನು ದಾನ ಮಾಡಬೇಕೆನ್ನುವ ಆಸೆ ಇತ್ತು. ಅವರು 1990ರಲ್ಲಿ ಮೃತರಾದರು. ಆದರೆ ಆ ಸಮಯದಲ್ಲಿ ಅದು ಸಾಧ್ಯವಾಗಲಿಲ್ಲ. ಕ್ರಮೇಣ ನನಗೂ ನೇತ್ರದಾನದ ಬಗ್ಗೆ ಆಸಕ್ತಿ ಮೂಡಿತು. ನನ್ನ ತಂದೆ ವೈದ್ಯರಾಗಿದ್ದರು. ಅಪ್ಪನಂತೆ ನಾನು ವೈದ್ಯೆ ಆಗಬೇಕೆನ್ನುವ ಆಸೆಯಿತ್ತು. ಕಾರಣಾಂತರಗಳಿಂದ ಆಗಲಿಲ್ಲ. ಅದರ ಬದಲಿಗೆ ಸಮಾಜಸೇವೆಯಲ್ಲಿ ತೊಡಗಿಕೊಳ್ಳಲು ನಿರ್ಧರಿಸಿದೆ. ಅದಕ್ಕಾಗಿಯೇ, ನಾರಾಯಣ ನೇತ್ರಾಲಯ ಹಾಗೂ ಲಯನ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಕಣ್ಣು ತೆಗೆಯುವ ತರಬೇತಿ ಪಡೆದುಕೊಂಡಿದ್ದೇನೆ. 1991ರಿಂದಲೇ ನಾನು ಕಣ್ಣು ಸಂಗ್ರಹ ಮಾಡುತ್ತಿದ್ದೇನೆ. 600ಕ್ಕೂ ಹೆಚ್ಚು ಕಣ್ಣುಗಳನ್ನು ಸಂಗ್ರಹಿಸಿದ್ದೇನೆ. 10 ಸಾವಿರಕ್ಕೂ ಅಧಿಕ ಮಂದಿಯಿಂದ ದಾನಕ್ಕೆ ಹೆಸರು ನೋಂದಾಯಿಸಿದ್ದೇನೆ.

ತುಮಕೂರು ಸೇರಿದಂತೆ ಸುತ್ತಮುತ್ತಲ ಸ್ಥಳಗಳಿಂದ ಕಣ್ಣು ಸಂಗ್ರಹ ಮಾಡುತ್ತಿದ್ದೇನೆ. ಕಣ್ಣು ತೆಗೆಯಲು ಧೈರ್ಯದಿಂದ ಯಾರಾದರೂ ಮುಂದೆ ಬಂದರೆ ನಾನು ಎಲ್ಲಿ ಬೇಕಾದರೂ ನೇತ್ರ ಸಂಗ್ರಹ ಕೇಂದ್ರಗಳನ್ನು ಸಂಘಸಂಸ್ಥೆಗಳ ವತಿಯಿಂದ ಶುರು ಮಾಡಲು ಸಿದ್ಧ. ಸದ್ಯಕ್ಕೆ ಪಾವಗಡ, ಹಿರಿಯೂರು, ತಿಪಟೂರು, ನಾಗಮಂಗಲ, ಕಡೂರು, ಕೊರಟಗೆರೆ, ಬಡವನಹಳ್ಳಿಯಲ್ಲಿ ಕೆಲವರು ಕಣ್ಣು ಸಂಗ್ರಹ ಮಾಡುವ ತರಬೇತಿ ಪಡೆಯಲು ಮುಂದೆ ಬಂದಿದ್ದಾರೆ. ಅವರಿಗೆಲ್ಲ ಶೀಘ್ರವೇ ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ ತರಬೇತಿ ಕೊಡಿಸುವೆ. ಬೇರೆಯವರು ಬಂದರೂ ಸ್ವಾಗತ.



ವೈಶ್ಯ ಸಮುದಾಯ ನಮ್ಮದು. ಸ್ಮಶಾನಕ್ಕೆ ಹೋಗುವುದು ನಮ್ಮ ಸಮುದಾಯದಲ್ಲಿ ನಿಷಿದ್ಧ. ಆದರೂ ಅಂಧರಿಗೆ ಕಣ್ಣು ಬರುತ್ತೆ ಅನ್ನೋ ಕಾರಣಕ್ಕೆ ಸ್ಮಶಾನಕ್ಕೂ ಹೋಗಿ ಕಣ್ಣುಗಳನ್ನು ಸಂಗ್ರಹಿಸಿದ್ದೇನೆ. ನನ್ನ ಮಗಳ ಮದುವೆಯಂದು ಬೆಳಿಗ್ಗೆ ನೇತ್ರದಾನಕ್ಕೆ ಕರೆ ಬಂದಿತ್ತು. ಆದರೆ, ನಮ್ಮ ಸಂಬಂಧಿಕರೆಲ್ಲ ಮದುವೆ ಮನೆಯವರು ಸಾವಿನ ಮನೆಗೆ ಹೆಣ ಮುಟ್ಟಿ ಬಂದರೆ ಹೇಗೆ ಎಂದು ಅಪಸ್ವರ ತೆಗೆದರು. ಆದರೆ ನನ್ನ ಪತಿ ನಾರಾಯಣ ಬಾಬು, 'ಅವಳಿಲ್ಲದಿದ್ದರೂ ಮದುವೆ ಕಾರ್ಯ ನಡೆಯುತ್ತದೆ. ಆದರೆ, ಅವಳು ಹೋಗಿ ಕಣ್ಣು ತಂದರೆ ಇಬ್ಬರಿಗೆ ದೃಷ್ಟಿ ಬರುತ್ತದೆ. ಅದಕ್ಕಿಂತ ಪುಣ್ಯದ ಕೆಲಸ ಮತ್ತೊಂದಿಲ್ಲ' ಎಂದು ನನಗೆ ಬೆಂಬಲವಾಗಿ ನಿಂತರು. ಅಂದು ನಾನು ಹೋಗಿ ಕಣ್ಣು ಸಂಗ್ರಹಿಸಿದ್ದೇನೆ.

**-ಲತಾ ನಾರಾಯಣ ಕೆ.ಎನ್**, ಮಧುಗಿರಿ

ಸಮಾಜಸೇವೆ ಬಗ್ಗೆ ಚಿಕ್ಕಂದಿನಿಂದಲೂ ಆಸಕ್ತಿ ಬೆಳೆಸಿಕೊಂಡಿದ್ದ ನಾನು 1988ರ ವೇಳೆಗೆ ವಾಸವಿ ಮಹಿಳಾ ಸಂಘದಲ್ಲಿ ತೊಡಗಿಕೊಂಡಿದ್ದೆ. ಆಗ ಪದ್ಮಾ ಸುರೇಂದ್ರನಾಥನ್ ಅದರ ಅಧ್ಯಕ್ಷರಾಗಿದ್ದರು. ನೇತ್ರದಾನದ ಬಗ್ಗೆ 1988ರಲ್ಲಿ ಟೀವಿಯೊಂದರಲ್ಲಿ ಸುದ್ದಿ ನೋಡಿದ್ದೆ. ಸಂಘದ ವತಿಯಿಂದ ಈ ಕಾರ್ಯವನ್ನು ನಾವೇಕೆ ಶುರು ಮಾಡಬಾರದು ಅನಿಸಿ ಪದ್ಮಾ ಜೊತೆಗೂಡಿ ಪ್ರಾರಂಭಿಸಿಯೇ ಬಿಟ್ಟೆವು.

ಸಾಕಷ್ಟು ಮಂದಿಯಿಂದ ನೇತ್ರದಾನಕ್ಕೆ ಹೆಸರು ನೋಂದಾಯಿಸಿಕೊಂಡೆವು. 1989ರಲ್ಲಿ ಒಂದೇ ಒಂದು ನೇತ್ರದಾನ ಮಾಡಿಸಲಷ್ಟೇ ನಮ್ಮಿಂದ ಸಾಧ್ಯವಾಯಿತು. ಕಾರಣ, ಕಣ್ಣನ್ನು ಪಡೆಯುವ ತಜ್ಞರ ಕೊರತೆ ಇತ್ತು. ಆಗ ವೈದ್ಯರಾದ ಜಯರಾಮ್ ಅವರಿಗೆ ಮನವಿ ಮಾಡಿ ಅವರಿಂದ ಆ ಕಾರ್ಯ ಮಾಡಿಸುತ್ತಿದ್ದೆ. ಆದರೆ ಎಲ್ಲ ಅವಧಿಯಲ್ಲಿ ಅವರು ಲಭ್ಯತೆ ದೊರೆಯುತ್ತಿರಲಿಲ್ಲ.



ಮೃತರಿಂದ ಕಣ್ಣುಗಳನ್ನು ಪಡೆಯುವ ಬಗ್ಗೆ ರಾಜ್‌ಕುಮಾರ್ ನೇತ್ರದಾನ ಕೇಂದ್ರದಿಂದ ತರಬೇತಿ ಪಡೆದೆ. ಅಲ್ಲಿಂದೀಚೆಗೆ ನಾನೇ 150 ಕಣ್ಣುಗಳನ್ನು ಸಂಗ್ರಹಿಸಿದ್ದೇನೆ. ಅದಕ್ಕೂ ಮುಂಚೆ 800 ಕಣ್ಣುಗಳನ್ನು ಬೇರೆ ಬೇರೆಯವರಿಂದ ಸಂಗ್ರಹಿಸಿ ನೇತ್ರದಾನ ಕೇಂದ್ರಗಳು ಹಾಗೂ ಆಸ್ಪತ್ರೆಗಳಿಗೆ ಕಳುಹಿಸಿದ್ದೇನೆ.

ನೇತ್ರದಾನಕ್ಕಾಗಿ 2000 ಮಂದಿಯಿಂದ ಹೆಸರು ನೋಂದಾಯಿಸಿದ್ದೇನೆ. ತುಮಕೂರು ಜಿಲ್ಲೆ, ಕೋಲಾರ, ಆಂಧ್ರದ ಅನಂತಪುರ ಜಿಲ್ಲೆ, ಬೆಂಗಳೂರು ಕಡೆಗಳಲ್ಲಿ ಜಾಗೃತಿ ಹಾಗೂ ನೇತ್ರಗಳನ್ನು ಸಂಗ್ರಹಿಸಿದ್ದೇನೆ. 'ಯಾರಾದರೂ ನೇತ್ರದಾನ ಮಾಡುತ್ತೇವೆ' ರಾತ್ರಿಯಾದರೂ ಅಲ್ಲಿಗೆ ಹೋಗಲು ಹಿಂಜರಿಯುವುದಿಲ್ಲ.

**-ಸಿ.ಎ. ಗಾಯತ್ರಿ ನಾರಾಯಣ್**, ಗೃಹಿಣಿ


ಸರ್ವೇಜನಃ ಸುಖಿನೋ ಭವಂತುಃ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.